**ಕರ್ನಾಟಕ ಸರ್ಕಾರ**

(ಕೃಷಿ ಇಲಾಖೆ)

ಸಂಖ್ಯೆ: ರೈ.ಸಂ.ಕೇ/ತಾ–1/72/ದಿನಾಂಕ–ಸುತ್ತೋಲೆ/13–14

ಕೃಷಿ ನಿರ್ದೇಶನಾಲಯ
ಶೇಷಾದ್ರಿ ರಸ್ತೆ, ಬೆಂಗಳೂರು–1
ದಿನಾಂಕ: 01.04.2014

**ಸುತ್ತೋಲೆ**

ವಿಷಯ: ರೈತ ಸಂಪರ್ಕ ಕೇಂದ್ರಗಳ ಕೃಷಿ ಪರಿಕರ ಮಾರಟ ವಹಿಗಳಲ್ಲಿ ಕಡ್ಡಾಯವಾಗಿ ದಿನಾಂಕಗಳನ್ನು ನಮೂದಿಸುವ ಬಗ್ಗೆ

ಉಲ್ಲೇಖ: 1.ಈ ಕಛೇರಿ ಸುತ್ತೋಲೆ ಸಂಖ್ಯೆ:ರೈ.ಸಂ.ಕೇ./ತಾ–1/56/ರೈ.ಸಂ.ಕೇ.ನಿ.ಸುತ್ತೋಲೆ/2013–14, ದಿನಾಂಕ: 31–01–14

2. ಈ ಕಛೇರಿ ಸುತ್ತೋಲೆ ಸಂಖ್ಯೆ:ರೈ.ಸಂ.ಕೇ./ತಾ–2/ರೈ.ಸಂ.ಕೇ./ವಹಿ/25/2012–13, ದಿನಾಂಕ:28–11–12

3. ಈ ಕಛೇರಿ ಸುತ್ತೋಲೆ ಸಂಖ್ಯೆ:ರೈ.ಸಂ.ಕೇ./ತಾ–2/ರಶೀದಿ/28/2012–13, ದಿನಾಂಕ: 17.09.2012

********

ಮೇಲಿನ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ ರೈತ ಸಂಪರ್ಕ ಕೇಂದ್ರಗಳ ಉತ್ತಮ ನಿರ್ವಹಣೆಯ ಬಗ್ಗೆ ಇಲಾಖೆಯಿಂದ ಅನೇಕ ಸುತ್ತೋಲೆಗಳು ಹೊರಡಿಸಲ್ಪಟ್ಟಿವೆ. ಆದರೆ ಇತ್ತೀಚೆಗೆ ದಿನಾಂಕ:21.03.2014 ರಂದು ಕೃಷಿ ಆಯುಕ್ತರು ತುಮಕೂರು ಜಿಲ್ಲೆಯ ತುಮಕೂರು ತಾಲ್ಲೂಕಿನ ಬೆಳ್ಳಾವಿ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕೆಲವು ನ್ಯೂನತೆಗಳು ಕಂಡುಬಂದಿರುವುದರಿಂದ ಉಲ್ಲೇಖಿತ ಸುತ್ತೋಲೆಗಳ ಅಂಶಗಳ ಜೊತೆಯಲ್ಲಿ ಈ ಕೆಳಕಂಡ ಅಂಶಗಳನ್ನು ರೈತ ಸಂಪರ್ಕ ಕೇಂದ್ರಗಳಲ್ಲಿ ಕಡ್ಡಾಯವಾಗಿ ಪಾಲಿಸಲು ತಿಳಿಸಿದೆ.

- ರೈತ ಸಂಪರ್ಕ ಕೇಂದ್ರಗಳಲ್ಲಿ ಸಹಾಯ ಧನದಲ್ಲಿ ನೀಡುವ ಕೃಷಿ ಪರಿಕರಗಳಾದ ಬೀಜ, ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿ, ಯಂತ್ರೋಪಕರಣ ಮುಂತಾದವುಗಳನ್ನು ದಾಸ್ತಾನು ಪಡೆದ ದಿನಾಂಕ ಮತು ಪ್ರಮಾಣಗಳನ್ನು ವಹಿಗಳಲ್ಲಿ ವಿವರವಾಗಿ ನಮೂದಿಸಿ ಅವುಗಳನ್ನು ವಿತರಣೆ ಮಾಡುವಾಗ ದಿನಾಂಕ, ಪರಿಕರ ಮತ್ತು ರೈತರ ವಿವರಗಳನ್ನು ತಪ್ಪದೇ ದಾಸ್ತಾನು ವಹಿಗಳಲ್ಲಿ ನಮೂದಿಸಬೇಕು.
- ರೈತ ಸಂಪರ್ಕ ಕೇಂದ್ರಗಳಲ್ಲಿ ಕೃಷಿ ಪರಿಕರಗಳ ಹಾಗೂ ಕೃಷಿಗೆ ಸಂಬಂಧಿಸಿದ ಸೌಲಭ್ಯಗಳನ್ನು ಪಡೆದುಕೊಳ್ಳಲು ರೈತರು ಸಲ್ಲಿಸುವ ಅರ್ಜಿಗಳನ್ನು ಸಂಬಂಧಪಟ್ಟ ವಹಿಗಳಲ್ಲಿ ಮತ್ತು ಅರ್ಜಿಗಳ ಮೇಲೆ ದಿನಾಂಕವನ್ನು ದಾಖಲಿಸಿ ಜೇಷ್ಠತಾ ಪಟ್ಟಿಯನ್ನು ಮಾಡುವುದು ಹಾಗೂ ರೈತ ಸಂಪರ್ಕ ಕೇಂದ್ರಗಳಿಂದ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ರವಾನಿಸುವ ಅರ್ಜಿಗಳ ಮೇಲೆಯೂ ಸಹ ದಿನಾಂಕ ನಮೂದಿಸಿ ಅ ದಿನದಂದೇ ಶಿಫಾರಸ್ಸು ಮಾಡಿ ಕಳುಹಿಸಿ ಜೇಷ್ಠತಾ ಪಟ್ಟಿ ಪ್ರಕಾರ ರೈತರಿಗೆ ಸೌಲಭ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳುವುದು.
- ಸೂಚನಾ ಫಲಕಗಳನ್ನು ಕಡ್ಡಾಯವಾಗಿ ಅಳವಡಿಸುವುದು.
- ಕೃಷಿ ಪರಿಕರಗಳ ಮಾರಾಟಗಾರರ ವಿವರಗಳನ್ನು ನಮೂದಿಸುವುದು.
- ಕೃಷಿ ಪರಿಕರಗಳ ದರಗಳು ಹಾಗೂ ಸರ್ಕಾರದ ಸಹಾಯ ಧನವನ್ನು ಪ್ರದರ್ಶಿಸುವುದು.
- ವಿಶೇಷ ಘಟಕ ಯೋಜನೆಯಡಿ ದೊರೆಯುವ ಸೌಲಭ್ಯಗಳ ವಿವರ ಮತ್ತು ದರ ಪಟ್ಟಿ
- ಹೊಸ ಯೋಜನೆಗಳ ಸಂಕ್ಷಿಪ್ತ ವಿವರ

(ಕರಡು ಕೃಷಿ ನಿರ್ದೇಶಕರಿಂದ ಅನುಮೋದಿಸಲ್ಪಟ್ಟಿದೆ)

ಕೃಷಿ ನಿರ್ದೇಶಕರ ಪರವಾಗಿ

ಪ್ರತಿಯನ್ನು ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ
ಪ್ರತಿಯನ್ನು ಮಾಹಿತಿಗಾಗಿ ಕಳುಹಿಸಿದೆ

1. ಅಪರ ಕೃಷಿ ನಿರ್ದೇಶಕರು(ಮಾನವ ಸಂಪನ್ಮೂಲ ಅಭಿವೃದ್ಧಿ), (ಬೆಳೆ ಅಭಿವೃದ್ಧಿ ಮತ್ತು ಯೋಜನೆ), (ಸಾವಯವ ಕೃಷಿ) ಇವರುಗಳ ಆಪ್ತ ವಿಭಾಗಕ್ಕೆ.
2. ಜಂಟಿ ಕೃಷಿ ನಿರ್ದೇಶಕರು(ವಿಸ್ತರಣೆ ಮತ್ತು ತರಬೇತಿ), (ಅಭಿವೃದ್ಧಿ), (ಪರಿಕರ).
3. ಕೃಷಿ ನಿರ್ದೇಶಕರ ಆಪ್ತ ವಿಭಾಗಕ್ಕೆ
4. ಕೃಷಿ ಆಯುಕ್ತರ ಆಪ್ತ ವಿಭಾಗಕ್ಕೆ